# ಮಾತು ಮರೆತ ಮೌನ



**ಎಂ.ಕೆ. ಭಾಸ್ಕರ ರಾವ್**
ಕಲೆ: ರೂಪಶ್ರೀ ಕಲ್ಲಿಗನೂರು

ರಾತ್ರಿ ಎಂಟಕ್ಕೆಲ್ಲ ಶಿರಸಿಯಲ್ಲಿರಬೇಕಿದ್ದ ದಾಂಡೇಲಿ-ಬೆಂಗಳೂರು ಬಸ್ಸು ಶಿರಸಿ ಹೊಸ ಬಸ್ ಸ್ಟ್ಯಾಂಡ್‌ಗೆ ಬಂದಾಗ ಹತ್ತು ಗಂಟೆ. ಬರೋಬ್ಬರಿ ಎರಡು ತಾಸು ತಡ. ಮಧುಮೇಹಿ ರೋಹಿತ್, ಧಡಧಡ ಬಸ್ಸಿಳಿದ. ಅವನ ಧಾವಂತ ನೋಡಿದವರಿಗೆ ಆತ ಬಸ್ಸಿನಿಂದ ಜಿಗಿದು ಹೊರ ಹಾರಿದಂತೆ ಅನಿಸುವಂತಿತ್ತು. ನಿತ್ಯನಿಯಮ ಪ್ರಕಾರ ಬಸ್ಸು ಶಿವಮೊಗ್ಗಕ್ಕೆ ಒಂಬತ್ತೂವರೆಗೆ, ಅಬ್ಬಬ್ಬಾ ಎಂದರೆ ಹತ್ತರ ಒಳಗೆ ಮುಟ್ಟಬೇಕು. ಜಿಗ್ರಿದೋಸ್ತ್ ಚಂದ್ರಹಾಸ ಕೂಡ ಶಿವಮೊಗ್ಗದ ಡೈಮಂಡ್ ರಾಕ್ನಲ್ಲಿ ಒಂದೂವರೆ ಎರಡು ತಾಸು ಸೆಷನ್ ನಡೆಸಿ ಹನ್ನೆರಡರ ಓಲ್ವೋದಲ್ಲಿ ಬೆಂಗಳೂರಿಗೆ ಹೊರಡುವುದು ರೋಹಿತ್‌ನ ಒರಿಜಿನಲ್ ಪ್ಲಾನು. ಯೋಜನೆಯೆಲ್ಲ ಉಲ್ಟಾಪಲ್ಟಾ ಆದ ನೋವಿನಲ್ಲಿ ರೋಹಿತ್, ಶಿರಸಿ ಬಸ್‌ಸ್ಟ್ಯಾಂಡ್ ಹೋಟೆಲಿಗೆ ದೌಡಾಯಿಸಿದ. ದಾಂಡೇಲಿಯಲ್ಲಿ ಹೊಟ್ಟೆಗೆ ಹಾಕಿದ್ದ ಉಪ್ಪಿಟ್ಟು ಕರಗಿ ಖಾಲಿ ಹೊಟ್ಟೆ ತಾಳ ಹಾಕುತ್ತಿತ್ತು. ಶುಗರ್ ಡೌನ್ ಆಗುತ್ತಿದ್ದುದರ ಮುನ್ಸೂಚನೆ ಸಿಕ್ಕಿತ್ತು. ಯಲ್ಲಾಪುರ ಬಸ್ ಸ್ಟ್ಯಾಂಡಿನಲ್ಲಿ ಬಿಸ್ಕಿಟ್ ಪ್ಯಾಕೆಟ್ ಕೊಳ್ಳುವ ಯೋಚನೆ ಬಂದಿತ್ತಾದರೂ ಒಂಬತ್ತೂವರೆ ಹೊತ್ತಿಗೆಲ್ಲ ಶಿವಮೊಗ್ಗ ಸೇರುತ್ತೇನಲ್ಲ ಎಂದು ಉಡಾಫೆ ಮಾಡಿದ್ದ.

ಬಸ್ಗೆ ಅವತ್ತೇ ಗ್ರಹಚಾರ ವಕ್ಕರಿಸಬೇಕಿತ್ತೆ? ಬೇಡ್ತಿ ನದಿ ಸೇತುವೆ ದಾಟಿದ್ದೇ ತಡ, ಬಸ್‌ನ ಮುಂದಿನ ಚಕ್ರ ಠುಸ್ ಆಯಿತು. ಎಡ ಚಕ್ರವೋ ಬಲ ಚಕ್ರವೋ, ಯಾವುದಾದರೂ ಪರಿಣಾಮ ಒಂದೇ. ಠುಸ್ ಆದರೆ ಚಲನೆ ಮುಗ್ಗರಿಸುತ್ತದೆ. ಹದವಾದ ಲಯದಲ್ಲಿ ಚಲಿಸುತ್ತಿದ್ದ ಬಸ್ ಮುಗ್ಗರಿಸಿದಾಗ, ಹೂ ನಿದ್ರೆಗೆ ಜಾರಿದ್ದ ಕೆಲವು ಪ್ರಯಾಣಿಕರು ಗಡಿಬಿಡಿಯಲ್ಲಿ ಎಚ್ಚರಾದರು. ಅಕ್ಸಿಡೆಂಟ್ ಆಯಿತೇನೋ ಎಂಬಂತೆ ಕೆಲವರು ಮುಲುಗಿದರು. ಏನಾಯಿತು ಎಂದು ನೋಡಲು ಕಿಟಕಿ ಪಕ್ಕ ಕುಳಿತವರು ಕತ್ತು ಹೊರ ಹಾಕಿ ಕತ್ತಲಲ್ಲಿ ಹುಡುಕಾಟ ನಡೆಸಿದರು. ಏನನ್ನೂ ಕಾಣಲಾಗದವರು ಅಕ್ಕಪಕ್ಕದವರಲ್ಲಿ ಕೇಳಿ ಸಮಾಧಾನ ಮಾಡಿಕೊಳ್ಳಲು ಮುಂದಾದರು. ಇದೆಲ್ಲ ಮಾಮೂಲು ಎಂಬಂತೆ ರಸ್ತೆ ಸೈಡ್‌ಗೆ ಬಸ್ ಹಾಕಿದ ಡ್ರೈವರ್ ಕೆಳಕ್ಕಿಳಿದ, ಟಾರ್ಚ್, ಒಂದೆರಡು ಹತಾರದೊಂದಿಗೆ ಕಂಡಕ್ಟರ್ ಹಿಂಬಾಲಿಸಿದ. ಡ್ರೈವರ್ ಖಾಕಿ ಸಮವಸ್ತ್ರ ಕಳಚಿದ. ಕೈಕೈ ಹಿಸುಕಿಕೊಳ್ಳುತ್ತ ತಮ್ಮ ಪ್ರಾರಬ್ಧಕ್ಕೆ ತಮ್ಮನ್ನು ತಾವೇ ಶಪಿಸಿಕೊಳ್ಳುತ್ತ ಸ್ಟೆಪಣಿ ಚಕ್ರ ತೆಗೆಯುವ ಕೆಲಸಕ್ಕೆ ಇಬ್ಬರೂ ಮುಂದಾದರು.

ಎರಡೊ ಮೂರೊ ದಿವಸಕ್ಕೆ ಅಮಾವಾಸ್ಯೆ. ಘನಘೋರ ಕತ್ತಲೆ. ಉತ್ತರ ಕನ್ನಡ ಜಿಲ್ಲೆಯ ಘಟ್ಟದ ಮೇಲಿನ ಯಲ್ಲಾಪುರ ಸುತ್ತಮುತ್ತಲಿನ ಪ್ರದೇಶ ಅರಣ್ಯ ಇಲಾಖೆ ದಸ್ತಾವೇಜು ಪ್ರಕಾರ ನಿತ್ಯಹರಿದ್ವರ್ಣ ಕಾಡು. ಮುಖ್ಯರಸ್ತೆಯಿಂದ ಕಾಡೊಳಕ್ಕೆ ಒಂದೆರಡು ಫರ್ಲಾಂಗ್ ಹೋದರೆ ಅಲ್ಲೆಲ್ಲ ಬೋಳು ಬೋಳು ಎನ್ನುವುದು ಅಸಲಿ ಸತ್ಯ. ನುಣ್ಣನೆಯ ತಲೆ ಬುರುಡೆಯ ಅಂಚಿನಲ್ಲಿ ಅರ್ಧ ಚಂದ್ರಾಕಾರದಲ್ಲಿ ಒಂದಿಷ್ಟು ಕೂದಲು ಇರುವಂತೆ ಈ ಕಾಡು. ಡ್ರೈವರ್ ಕಂಡಕ್ಟರ್ ಇಳಿಯುತ್ತಿದ್ದಂತೆ ಕೆಲವು ಪ್ರಯಾಣಿಕರೂ ಇಳಿದರು. ರಸ್ತೆಯಂಚಿನಲ್ಲಿ